## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 652 |
| ಸದಸ್ಯರ ಹೆಸರು | : | ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 18.08.2025. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಶಿಕ್ಷಕರ ಕಲ್ಯಾಣ ನಿಧಿ ಕಛೇರಿಗೆ ಕಂಪ್ಯೂಟರ್ ಪ್ರೋಗ್ರಾಮರ್ ಹುದ್ದೆ ಮಂಜೂರಾಗಿದೆಯೇ; ಮಂಜೂರಾಗಿದ್ದಲ್ಲಿ, ಆದೇಶದ ಪ್ರತಿ ಒದಗಿಸುವುದು; | ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 01.10.1990 ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕಂಪ್ಯೂಟರ್ ಪ್ರೋಗ್ರಾಮರ್ ಹುದ್ದೆಯನ್ನು ಮಂಜೂರು ಮಾಡಿ ನೇಮಿಸಲು ತೀರ್ಮಾನಿಸಲಾಗಿದ್ದು, ಸಭೆಯ ನಡವಳಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ) | ಹುದ್ದೆ ಮಂಜೂರಾಗಿದ್ದಲ್ಲಿ, ಈ ಹುದ್ದೆಯನ್ನು ಭರ್ತಿ ಮಾಡಲಾಗಿದೆಯೇ; ಭರ್ತಿ ಮಾಡಿದ್ದಲ್ಲಿ, ನೇಮಕಾತಿ ಆದೇಶದ ಪ್ರತಿ ಒದಗಿಸುವುದು; | ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 01.10.1990 ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯ ತೀರ್ಮಾನದಂತೆ, ಕಂಪ್ಯೂಟರ್ ಪ್ರೋಗ್ರಾಮರ್ ಹುದ್ದೆಗೆ ನೇಮಕಾತಿ ಆದೇಶ ಸಂಖ್ಯೆ: F2.TBF/EST.121/90-91, ದಿನಾಂಕ: 22.01.1991ನ್ನು ನೀಡಲಾಗಿದೆ. ಸದರಿ ಹುದ್ದೆಗೆ ನೇಮಕಗೊಂಡವರು ದಿನಾಂಕ: 26.07.1994 ರಂದು ರಾಜೀನಾಮೆ ನೀಡಿರುತ್ತಾರೆ.<br><br>ದಿನಾಂಕ: 21.06.1995 ರಂದು ಈ ಹುದ್ದೆಗೆ ಮತ್ತೊಬ್ಬರನ್ನು ವೇತನ ಶ್ರೇಣಿ ರೂ.2050-3950 ರಲ್ಲಿ ನೇಮಕ ಮಾಡಲಾಗಿದೆ. ನೇಮಕಾತಿ ಆದೇಶದ ಪ್ರತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಇ) | ನೇಮಕಾತಿ ಅನುಮೋದನೆಯಾಗಿದೆಯೇ; ಅನುಮೋದನೆಯಾಗಿದ್ದಲ್ಲಿ, ಸರ್ಕಾರಿ ಆದೇಶದ ಪ್ರತಿ / ಕಾರ್ಯಕಾರಿ ಸಮಿತಿ ನಡವಳಿ ಒದಗಿಸುವುದು; | ದಿನಾಂಕ: 22.01.1991 ರಲ್ಲಿ ಮಾಡಲಾದ ನೇಮಕಾತಿಯು ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 22.04.1992 ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅನುಮೋದನೆಯಾಗಿರುತ್ತದೆ. ಸಭೆಯ ನಡವಳಿಯನ್ನು **ಅನುಬಂಧ-3** ರಲ್ಲಿ ಒದಗಿಸಿದೆ.<br><br>ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಕಂಪ್ಯೂಟರ್ ಪ್ರೋಗ್ರಾಮರ್ ರವರ ನೇಮಕಾತಿಯು ಕಾರ್ಯಕಾರಿ ಸಮಿತಿಯಲ್ಲಿ ಅನುಮೋದನೆಯಾಗಿರುವುದಿಲ್ಲ. |

| | | |
|---|---|---|
| ಈ) | ಈ ಹುದ್ದೆಗೆ ಯಾವ ವೇತನ ಶ್ರೇಣಿ ನಿಗಧಿಪಡಿಸಲಾಗಿದೆ; | ನೇಮಕಾತಿ ಸಮಯದಲ್ಲಿ ವೇತನ ಶ್ರೇಣಿ ರೂ.1900-3650ಕ್ಕೆ ನಿಗಧಿಪಡಿಸಲಾಗಿದ್ದು, ಪ್ರಸ್ತುತ ಈ ಹುದ್ದೆಯ ವೇತನ ಶ್ರೇಣಿ ರೂ.78000-148200 ಆಗಿರುತ್ತದೆ. |
| ಉ) | ವೇತನ ನಿಗಧಿಪಡಿಸಲು ಅನುಮತಿ ನೀಡಿದ ಆರ್ಥಿಕ ಇಲಾಖೆ ಆದೇಶ / ಸರ್ಕಾರಿ ಆದೇಶ / ಕಾರ್ಯಕಾರಿ ಸಮಿತಿಯ ನಡವಳಿ ಪ್ರತಿ ಒದಗಿಸುವುದು? | ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 22.04.1992 ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯ ನಡವಳಿಯನ್ನು **ಅನುಬಂಧ-3** ರಲ್ಲಿ ಒದಗಿಸಿದೆ. |

ಇಪಿ 144 ಡಿಎಆರ್ 2025

**(ಎಸ್. ಮಧುಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಅನುಬಂಧ-7

ದಿನಾಂಕ 1—10—1990ರಂದು ಮಾನ್ಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ನಿಧಿಗಳ ರಾಜ್ಯ ಸಮಿತಿ ಸಭೆಯ ನಡವಳಿಕೆಗಳು

ಹಾಜರಿದ್ದ ಸದಸ್ಯರು

1. ಮಾನ್ಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು .. ಅಧ್ಯಕ್ಷರು

2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ... ಸದಸ್ಯರು— ಕಾರ್ಯದರ್ಶಿ: ಖಜಾಂಚಿಗಳು

3. ಸರ್ಕಾರದ ಕಾರ್ಯದರ್ಶಿಗಳು—2, ಶಿಕ್ಷಣ ಇಲಾಖೆ .. ಸದಸ್ಯರು } ಪ್ರತಿನಿಧಿಗಳು

4. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ .. ಸದಸ್ಯರು

5. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ .. ಸದಸ್ಯರು

6. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ .. ಸದಸ್ಯರು

7. ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರ ಮತ್ತು ಕಿರಿಯ ಮಹಾವಿದ್ಯಾಲಯಗಳ ಪ್ರಾಚಾರ್ಯರ ಸಂಘ .. ಸದಸ್ಯರು

8. ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ .. ಸದಸ್ಯರು

9. ಶ್ರೀ ಸಿ. ಹನುಮೇಗೌಡ, ನಿರ್ದೇಶಕರು (ನಿವೃತ್ತ), ಸಾರ್ವಜನಿಕ ಶಿಕ್ಷಣ ಇಲಾಖೆ .. ಸದಸ್ಯರು

10. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ .. ಆಹ್ವಾನಿತರು

11. ಡಾ: ಎಂ. ಶ್ರೀನಿವಾಸ, ಮುಖ್ಯ ವೈದ್ಯಕೀಯ ಪರಿವೀಕ್ಷಕರು, ಸಾರ್ವಜನಿಕ ಶಿಕ್ಷಣ ಇಲಾಖೆ .. ಆಹ್ವಾನಿತರು

ಗೈರುಹಾಜರಾದ ಸದಸ್ಯರು

1. ಸರ್ಕಾರದ ಆಯುಕ್ತರು ಹಾಗೂ ಶಿಕ್ಷಣ ಕಾರ್ಯದರ್ಶಿಗಳು—1

2. ಪ್ರೊ: ಎಸ್.ಆರ್. ರೋಹಿಡೇಕರ, ನಿವೃತ್ತ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ

3. ಡಾ: ಮಲಕಾರೆಡ್ಡಿ, ಎಂ.ಎಲ್.ಎ., ಗುಲ್ಬರ್ಗಾ

ಮಾನ್ಯ ಶಿಕ್ಷಣ ಸಚಿವರು ಹಾಗೂ ರಾಜ್ಯ ಸಮಿತಿಯ ಅಧ್ಯಕ್ಷರು ಸಮಿತಿಯ ಸದಸ್ಯರನ್ನು ಸ್ವಾಗತಿಸಿದನಂತರ, ಸಮಿತಿಯು ಮಂಡಿಸಲಾದ ವಿಷಯಗಳನ್ನು ಕೂಲಂಕುಶವಾಗಿ ಪರಿಶೀಲಿಸಿ, ಈ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿತು:—

ಸಾಮಾನ್ಯ

1. ದಿನಾಂಕ 23—3—1990ರಂದು ನಡೆದ ಸಭೆಯ ನಡವಳಿಯನ್ನು ಸ್ಥಿರೀಕರಿಸುವ ಬಗ್ಗೆ.

ಸ್ಥಿರೀಕರಿಸಿದೆ.

2. ದಿನಾಂಕ 23—3—1990ರಂದು ನಡೆದ ಸಭೆಯ ನಡವಳಿಯ ಬಗ್ಗೆ ತೆಗೆದುಕೊಂಡ ಕ್ರಮವನ್ನು ಅನುಮೋದಿಸುವ ಬಗ್ಗೆ

ಹಿಂದಿನ ಸಭೆಯ ನಡವಳಿಯ ಬಗ್ಗೆ ತೆಗೆದುಕೊಂಡ ಕ್ರಮವನ್ನು ಅನುಮೋದಿಸುತ್ತಾ, ಸಮಿತಿಯು ಈ ಕೆಳಕಂಡ ತೀರ್ಮಾನಗಳನ್ನು ಕೈಗೊಂಡಿತು:—

(ಅ) ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ನಿರ್ಮಿಸಲಾಗುತ್ತಿರುವ ಶಿಕ್ಷಕರ ಭವನ ಕಟ್ಟಡಗಳ ಮೇಲೆ ಲೋಕೋಪಯೋಗಿ ಇಲಾಖೆಯು ನಿರ್ಬಂಧಿಸಿರುವ ಇ.ಟಿ.ಪಿ. ಛಾರ್ಜನ್ನು ಮನ್ನಾ ಮಾಡುವ ವಿಚಾರದಲ್ಲಿ ತಾವು ಸದ್ಯದಲ್ಲಿಯೇ ಲೋಕೋಪಯೋಗಿ ಇಲಾಖಾ ಮಂತ್ರಿಗಳ ಜೊತೆ ಚರ್ಚಿಸುವುದಾಗಿಯೂ, ಈ ಬಗ್ಗೆ ತಮ್ಮನ್ನು ಜ್ಞಾಪಿಸಬೇಕೆಂದು ಅಧ್ಯಕ್ಷರು ನಿಧಿಗಳ ಕಾರ್ಯದರ್ಶಿ:ಖಜಾಂಚಿಯವರಿಗೆ ಸೂಚಿಸಿದರು.

(ಆ) ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ನಿರ್ಮಿಸಬೇಕಾಗಿದ್ದ ಶಿಕ್ಷಕರ ವಾರ್ಡಿನ ಕಾರ್ಯವು ಇದುವರೆಗೂ ಪ್ರಾರಂಭವಾಗದಿದ್ದು, ಕಟ್ಟಡದ ವಸ್ತುಗಳ ಬೆಲೆ ದಿನೆ ದಿನೇ ಹೆಚ್ಚುತ್ತಿರುವುದರಿಂದ, ಸರ್ಕಾರದ ಆರೋಗ್ಯ ಇಲಾಖೆಯ ಕಾರ್ಯದರ್ಶಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನಿರ್ದೇಶಕರೊಂದಿಗೆ ಈ ಬಗ್ಗೆ ಚರ್ಚಿಸಿ, ಶಿಕ್ಷಕರ ವಾರ್ಡಿನ ಕಾರ್ಯವನ್ನು ಆರಂಭಿಸಲು ಅನುಮತಿ ನೀಡಬೇಕೆಂದು, ಈ ವಿಷಯವಾಗಿ ನಿಧಿಗಳ ಕಛೇರಿಯಿಂದ ಪತ್ರವ್ಯವಹಾರ ನಡೆಸಬೇಕೆಂದು ಸಮಿತಿಯು ಸೂಚಿಸಿತು.

3. ನಿಧಿಗಳ ಸಹಾಯಕ ಕಾರ್ಯದರ್ಶಿಯವರಿಗೆ ನೀಡಲಾಗಿರುವ ಆರ್ಥಿಕ ಮಂಜೂರಾತಿ ಅಧಿಕಾರವನ್ನು ಏರಿಸುವ ಬಗ್ಗೆ.

ದಿನಾಂಕ 26—3—88ರ ರಾಜ್ಯ ಸಮಿತಿಯ ಸಭೆಯಲ್ಲಿ ನಿಧಿಗಳ ಸಹಾಯಕ ಕಾರ್ಯದರ್ಶಿಯವರಿಗೆ 500 ರೂ.ಗಳವರೆಗೆ ಆರ್ಥಿಕ ಮಂಜೂರಾತಿ ಅಧಿಕಾರವನ್ನು ನೀಡಲಾಗಿದ್ದು, ಇದನ್ನು 2000 ರೂ.ಗಳವರೆಗೆ ಏರಿಸಲು ಹಾಗೂ ತುರ್ತು ವೈದ್ಯಕೀಯ ಪ್ರಕರಣಗಳಲ್ಲಿ ಆಯುಕ್ತರು: ಕಾರ್ಯದರ್ಶಿ—ಖಜಾಂಚಿಗಳಿಂದ ಮಂಜೂರಾದ ಪ್ರಕರಣಗಳಲ್ಲಿ 5000 ರೂ.ಗಳವರೆಗೆ ಬ್ಯಾಂಕ್ ಹುಂಡಿಗಳನ್ನು ಪಡೆಯಲು ಬ್ಯಾಂಕಿಗೆ ಕಳುಹಿಸುವ ಬೇಡಿಕೆ ಪತ್ರಗಳಿಗೆ ಸಹಿ ಮಾಡುವ ಅಧಿಕಾರವನ್ನು ಸಹಾಯಕ ಕಾರ್ಯದರ್ಶಿಗಳಿಗೆ ನೀಡಲು ಸಮಿತಿಯು ಒಪ್ಪಿಗೆ ನೀಡಿತು.

4. <u>ನಿಧಿಗಳಿಂದ ಸರ್ಕಾರದಲ್ಲಿ ಠೇವಣಿ ಇಟ್ಟಿರುವ ರೂ.2 ಕೋಟಿ ಹಣಕ್ಕೆ ಸರ್ಕಾರದಿಂದ ಸಕಾಲದಲ್ಲಿ ಬಡ್ಡಿ ಬರುತ್ತಿಲ್ಲವಾದ್ದರಿಂದ, ಠೇವಣಾತಿಯನ್ನು ವಾಪಸ್ಸು ಪಡೆಯುವ ಬಗ್ಗೆ</u>

ನಿಧಿಗಳಿಂದ ಠೇವಣಿ ಇಟ್ಟಿರುವ ಹಣಕ್ಕೆ ನೀಡಬೇಕಾದ ಬಡ್ಡಿಯನ್ನು ಸಕಾಲದಲ್ಲಿ ನಿಧಿಗಳ ಖಾತೆಗೆ ಜಮಾ ಮಾಡಿರುವುದಾಗಿ, ನಿಧಿಗಳ ಕಛೇರಿಯಿಂದ ಅದನ್ನು ಪಡೆದಿಲ್ಲವೆಂದು ಖಜಾನೆಗಳ ನಿರ್ದೇಶಕರು ತಿಳಿಸಿರುವುದಾಗಿ ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು ಸಭೆಯಲ್ಲಿ ತಿಳಿಸಿದನಂತರ, ಬಡ್ಡಿ ಹಣವನ್ನು ಪಡೆಯಲು ಕ್ರಮ ಕೈಗೊಳ್ಳಲು ಸಮಿತಿಯು ಸೂಚಿಸಿತು.

ಠೇವಣಿಯನ್ನು ವಾಪಸ್ಸು ಪಡೆಯುವ ಬಗ್ಗೆ ತಾವು ಅರ್ಥಸಚಿವರೊಂದಿಗೆ ಚರ್ಚಿಸಿ, ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ತಿಳಿದುಕೊಂಡು, ನಂತರ ಮುಂದಿನ ಕ್ರಮ ತೆಗೆದುಕೊಳ್ಳುವುದಾಗಿ ಅಧ್ಯಕ್ಷರು ತಿಳಿಸಿದರು.

5. <u>ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ಶಿಕ್ಷಕರ ಕಲ್ಯಾಣ ನಿಧಿಗಳಿಂದ ಇತರ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳಿಗೆ ನೀಡುವಂತೆ ವಿದ್ಯಾರ್ಥಿವೇತನವನ್ನು ಕುವೆಂಪು ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳಿಗೂ ವಿಸ್ತರಿಸುವ ಬಗ್ಗೆ</u>

ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ಶಿಕ್ಷಕರ ಕಲ್ಯಾಣ ನಿಧಿಗಳಿಂದ ಪದವಿ ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ನೀಡುತ್ತಿರುವಂತೆ, ಕುವೆಂಪು ವಿಶ್ವವಿದ್ಯಾಲಯ ವಿದ್ಯಾರ್ಥಿಗಳಿಗೂ ಈ ವಿದ್ಯಾರ್ಥಿವೇತನಗಳನ್ನು ನೀಡಲು ಸಮಿತಿಯು ಅಂಗೀಕರಿಸಿತು.

6. <u>ಕಛೇರಿಯಲ್ಲಿ ಕೆಲಸದ ಒತ್ತಡ ಹೆಚ್ಚಾಗಿರುವುದರಿಂದ, ಲೆಕ್ಕಪತ್ರಗಳ ವಿಭಾಗಕ್ಕೆ ಒಬ್ಬರು ಅಧೀಕ್ಷಕರು, ಕಂಪ್ಯೂಟರ ವಿಭಾಗಕ್ಕೆ ಒಬ್ಬರು ಪ್ರೋಗ್ರಾಮರ-ಕಮ್-ಆಪರೇಟರ ಮತ್ತು 'ಡಿ' ಗುಂಪಿನ ಒಂದು ಹುದ್ದೆಯನ್ನು ಮಂಜೂರು ಮಾಡುವ ಬಗ್ಗೆ</u>

ಹಿಂದಿನ ಸಭೆಯ ನಡವಳಿಕೆಗಳ ಮೇಲೆ ಕ್ರಮ ತೆಗೆದುಕೊಳ್ಳುವಲ್ಲಿ ತುಂಬಾ ವಿಳಂಬವಾಗಿದೆ ಎಂದು ಸಮಿತಿಯು ಆಕ್ಷೇಪಿಸುತ್ತಾ, ನಿಧಿಗಳ ಕಛೇರಿಯ ಕಾರ್ಯವು ಸರಾಗವಾಗಿ ಸಾಗುವಂತೆ ನೋಡಿಕೊಳ್ಳುವ ಸಲುವಾಗಿ, ಲೆಕ್ಕಪತ್ರ ವಿಭಾಗಕ್ಕೆ ಒಬ್ಬರು ಅಧೀಕ್ಷಕರು, ಕಂಪ್ಯೂಟರ ವಿಭಾಗಕ್ಕೆ ಒಬ್ಬರು ಕಂಪ್ಯೂಟರ-ಪ್ರೋಗ್ರಾ-ಕಮ್-ಆಪರೇಟರ ಮತ್ತು 'ಡಿ' ಗುಂಪಿನ ನೌಕರರ ಒಂದು ಹುದ್ದೆಯನ್ನು ಮಂಜೂರು ಮಾಡಿತು. ಅಧೀಕ್ಷರ ಹುದ್ದೆಗೆ ಎಸ್.ಎ.ಎಸ್. ಅರ್ಹತೆಯನ್ನು ಹೊಂದಿರುವವರನ್ನು ನಿಯೋಜನೆ ಮೇರೆಗೆ ರಾಜ್ಯ ಲೆಕ್ಕಪತ್ರ ಇಲಾಖೆಯಿಂದಲಾಗಲಿ ಅಥವಾ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದಲಾಗಿ ನೇಮಿಸಬೇಕೆಂದು ನಿರ್ಣಯಿಸಿತು.

7. <u>ನಿಧಿಗಳ ಕಛೇರಿಗೆ ಇಬ್ಬರು ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡುವ ಬಗ್ಗೆ</u>

ಸದರಿ ಹುದ್ದೆಗಳನ್ನು ಮಂಜೂರು ಮಾಡಲು ಸಾಕಷ್ಟು ಮಾಹಿತಿಗಳು ಇಲ್ಲದಿರುವುದರಿಂದ, ಪೂರ್ಣ ಮಾಹಿತಿಗಳೊಂದಿಗೆ ಮುಂದಿನ ಸಭೆಯಲ್ಲಿ ಮಂಡಿಸುವಂತೆ ನಿರ್ಣಯಿಸಲಾಯಿತು.

ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ:

8. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಗುರುಭವನಗಳನ್ನು ನಿರ್ಮಿಸಲು ನೀಡಲಾಗುತ್ತಿರುವ ಅನುದಾನವನ್ನು ಏರಿಸುವ ಬಗ್ಗೆ

ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಗುರುಭವನಗಳನ್ನು ನಿರ್ಮಿಸಲು ನೀಡುತ್ತಿರುವ ಅನುದಾನವನ್ನು ನಿಗದಿಪಡಿಸಿ ಎರಡು ವರ್ಷಗಳು ಕಳೆದು, ಈ ಎರಡು ವರ್ಷಗಳಲ್ಲಿ ಕಟ್ಟಡ ವಸ್ತುಗಳ ಬೆಲೆಗಳು ದ್ವಿಗುಣಗೊಂಡಿರುವುದರಿಂದ, ತಾಲ್ಲೂಕು ಮಟ್ಟದ ಗುರುಭವನಕ್ಕೆ ನೀಡುತ್ತಿರುವ ಅನುದಾನವನ್ನು ರೂ.2.00 ಲಕ್ಷದಿಂದ ರೂ.2.50 ಲಕ್ಷಕ್ಕೆ ಮತ್ತು ಜಿಲ್ಲಾ ಮಟ್ಟದ ಗುರುಭವನಕ್ಕೆ ನೀಡುತ್ತಿರುವ ಅನುದಾನವನ್ನು ರೂ.3.00 ಲಕ್ಷದಿಂದ ರೂ.3.50ಕ್ಕೆ ಹೆಚ್ಚಿಸಲು ಸಮಿತಿಯು ಅಂಗೀಕರಿಸಿತು.

9. ನವ್ಯ ರೀತಿಯ ಶೈಕ್ಷಣಿಕ ಸಂಶೋಧನೆ ಮತ್ತು ಸೃಜನಾತ್ಮಕ ಬರವಣಿಗೆಯಲ್ಲಿ ತೊಡಗಿರುವ ಶಿಕ್ಷಕರಿಗೆ ಧನ ಸಹಾಯ ನೀಡುವ ಬಗ್ಗೆ ಒಂದು ಸಮಿತಿಯನ್ನು ರಚಿಸುವ ಬಗ್ಗೆ

ಈ ಯೋಜನೆಯನ್ನು ರದ್ದುಗೊಳಿಸಲು ಸಮಿತಿಯು ನಿರ್ಣಯಿಸಿತು.

10. ಶ್ಲಾಘನೀಯ ಸೇವೆ ಸಲ್ಲಿಸಿದ ಶಿಕ್ಷಕರಿಗೆ ನೀಡುವ ಅನುಗ್ರಹಣ ಕೊಡುಗೆಯನ್ನು ರೂ.3,000ಗಳಿಂದ ರೂ.1,000ಗಳಿಗೆ ಇಳಿಸುವ ಬಗ್ಗೆ ಹಾಗೂ ಸದರಿ ಶಿಕ್ಷಕರನ್ನು ರಾಜ್ಯ ಪ್ರಶಸ್ತಿ ಮತ್ತು ರಾಷ್ಟ್ರ ಪ್ರಶಸ್ತಿಗಳಿಗೆ ಶಿಫಾರಸ್ಸು ಮಾಡಿರುವ ಪಟ್ಟಿಯಿಂದ ಆಯ್ಕೆ ಮಾಡುವ ಬಗ್ಗೆ

ಶ್ಲಾಘನೀಯ ಸೇವೆ ಸಲ್ಲಿಸಿದ ಶಿಕ್ಷಕರಿಗೆ ನೀಡುವ ಅನುಗ್ರಹ ಕೊಡುಗೆ ಪ್ರಮಾಣವನ್ನು ರೂ.3000ಗಳಿಂದ ರೂ.1000ಗಳಿಗೆ ಇಳಿಸಲು ಸಮಿತಿಯು ಒಪ್ಪಿಗೆ ನೀಡಿ, ಈ ಶಿಕ್ಷಕರನ್ನು ಗುರುತಿಸಲು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಎರಡು ಸಮಿತಿಗಳನ್ನು ರಚಿಸಿ, ತುರ್ತು ಕ್ರಮ ಕೈಗೊಳ್ಳಲು ಸೂಚಿಸಿತು.

11. ಶಿಕ್ಷಕರ ಕಲ್ಯಾಣ ನಿಧಿಯ ವತಿಯಿಂದ ಕೈಗೊಂಡಿರುವ ವಿವಿಧ ಧನ ಸಹಾಯ ಯೋಜನೆಗಳ ಫಲಾನುಭವಿಗಳಲ್ಲಿ ಸರ್ಕಾರದ ಮಾನ್ಯತೆ ಪಡೆದಿರುವ ಎಲ್ಲಾ ಸಂಸ್ಥೆಗಳ ಶಿಕ್ಷಕರನ್ನು ಸೇರಿಸುವ ಬಗ್ಗೆ

ಈ ವಿಚಾರದಲ್ಲಿ ಕಾಲೇಜು ಶಿಕ್ಷಣ ನಿರ್ದೇಶಕರಿಗೆ, ಕಾಲೇಜು ಶಿಕ್ಷಕರ ಸಂಘದ ಅಧ್ಯಕ್ಷರಿಗೆ ಮತ್ತು ಕಾಲೇಜು ಶಿಕ್ಷಣ ನಿರ್ದೇಶನಾಲಯದ ವಿಭಾಗೀಯ ಉಪನಿರ್ದೇಶಕರುಗಳಿಗೆ ಪತ್ರ ಬರೆಯಬೇಕೆಂದೂ, ನಿಧಿಗಳ ಯೋಜನೆಗಳನ್ನು ಮಾನ್ಯತೆ ಪಡೆಯದ ಸಂಸ್ಥೆಗಳ ಶಿಕ್ಷಕರಿಗೆ ವಿಸ್ತರಿಸಲಾಗಿಯೇ ಎಂಬುದನ್ನು ಖಚಿತಪಡಿಸಿಕೊಂಡು ಮುಂದಿನ ಸಭೆಯಲ್ಲಿ ಮಂಡಿಸಬೇಕೆಂದು ಸಮಿತಿಯು ಸೂಚಿಸಿತು.

12. ಬೆಂಗಳೂರು ಕೇಂದ್ರದಲ್ಲಿ 'ಶಿಕ್ಷಕರ ಸದನ' ನಿರ್ಮಾಣ ಮಾಡುವ ಬಗ್ಗೆ

ಈ ವಿಷಯದಲ್ಲಿ ತಮಗೆ ಒಂದು ಟಿಪ್ಪಣಿ ಕಳುಹಿಸಬೇಕೆಂದೂ, ತಾವು ಸಂಬಂಧಿಸಿದ ಇಲಾಖೆಯ ಕಾರ್ಯದರ್ಶಿಗಳೊಂದಿಗೆ ಈ ಬಗ್ಗೆ ಚರ್ಚಿಸಿ, ಮುಂದಿನ 'ಶಿಕ್ಷಕರ ದಿನಾಚರಣೆ' ಸಂದರ್ಭದಲ್ಲಿ ಬೆಳ್ಳಿಹಬ್ಬವನ್ನು ಆಚರಿಸುವುದರ ಜೊತೆಗೆ ಶಿಕ್ಷಕ ಸದನದ ಶಂಕುಸ್ಥಾಪನೆಯನ್ನು ನೆರವೇರಿಸುವುದಾಗಿ ಮಾನ್ಯ

22. <u>ಶಾಲಾ ತಪಾಸಣಾ ಸಮಯದಲ್ಲಿ ಆಯಾ ಶಾಲೆಯಲ್ಲಿ ನಿಧಿಗಳ ಲೆಕ್ಕಪತ್ರಗಳ ತಪಾಸಣೆ ನಡೆಸಿ, ವರದಿ ಸಲ್ಲಿಸುವ ವಿದ್ಯಾಧಿಕಾರಿಗಳಿಗೆ ಪ್ರತಿಯೊಂದು ತಪಾಸಣೆಗೆ ರೂ.10ರಂತೆ ಸಂಭಾವನೆ ನೀಡುವ ಬಗ್ಗೆ</u>

ಉಪನಿರ್ದೇಶಕರ ಕಛೇರಿಯ ವಿದ್ಯಾಧಿಕಾರಿಗಳು ಶಾಲಾ ತಪಾಸಣಾ ಸಮಯದಲ್ಲಿ, ನಿಧಿಗಳ ಲೆಕ್ಕಪತ್ರಗಳ ತಪಾಸಣೆಯನ್ನು ನಡೆಸಿ, ವರದಿ ಸಲ್ಲಿಸಿದರೆ, ಪ್ರತಿ ತಪಾಸಣೆಗೆ ರೂ.10ರಂತೆ ಸಂಭಾವನೆ ನೀಡಬಹುದೆಂದು, ಇದನ್ನು ಈ ವರ್ಷ ಪ್ರಯೋಗಾತ್ಮಕವಾಗಿ ನಡೆಸಬಹುದೆಂದು ಸಮಿತಿಯು ನಿರ್ಣಯಿಸಿತು.

23. <u>ಪ್ರತಿ ವರ್ಷ ಡಿಸೆಂಬರ್ ಮೊದನೇ ವಾರದಲ್ಲಿ ಸಹಾಯಕ ಶಿಕ್ಷಣಾಧಿಕಾರಿಗಳ ರಾಜ್ಯ ಮಟ್ಟದ ಸಮ್ಮೇಳನವನ್ನು ನಡೆಸುವ ಬಗ್ಗೆ</u>

ಪ್ರತಿ ವರ್ಷ ಡಿಸೆಂಬರ್ ಮೊದಲನೇ ವಾರದಲ್ಲಿ ಎರಡು ದಿನಗಳ ಕಾಲ ಸಹಾಯಕ ಶಿಕ್ಷಣಾಧಿಕಾರಿಗಳ ರಾಜ್ಯ ಮಟ್ಟದ ಸಮ್ಮೇಳನವನ್ನು ನಡೆಸಲು ಸಮಿತಿಯು ತನ್ನ ಒಪ್ಪಿಗೆಯನ್ನು ನೀಡಿತು.

24. <u>ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಶಿಕ್ಷಕರ ವಾರ್ಡುಗಳನ್ನು ನಿರ್ಮಿಸಲು ರೂ.9 ಲಕ್ಷ ಕಾಮಗಾರಿಕೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ</u>

ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಯ ನಿರ್ದೇಶಕರು ಶಿಕ್ಷಕರಿಗಾಗಿ 9 ಕೊಠಡಿಗಳನ್ನು ಅವರ ಆಸ್ಪತ್ರೆಯಲ್ಲಿ ನಿರ್ಮಿಸಲು ಕಳುಹಿಸಿಕೊಟ್ಟಿರುವ ಅಂದಾಜು ಪಟ್ಟಿಯನ್ನು ಸಮಿತಿಯು ಅನುಮೋದಿಸಿ, ಸದರಿ ಆಸ್ಪತ್ರೆಯ ಆವರಣದಲ್ಲಿ ಶಿಕ್ಷಕರ ಕೊಠಡಿಗಳಿಗಿಂತ ಶಿಕ್ಷಕರ ವಾರ್ಡುಗಳನ್ನು ನಿರ್ಮಿಸುವುದು ಉತ್ತಮವೆಂದು ಅಭಿಪ್ರಾಯಪಟ್ಟು, ಈ ಬಗ್ಗೆ ಕಾರ್ಯದರ್ಶಿ:ಖಜಾಂಚಿಗಳು ಆಸ್ಪತ್ರೆಯ ನಿರ್ದೇಶಕರೊಂದಿಗೆ ಚರ್ಚಿಸಿ, ಶಿಕ್ಷಕರ ಕೊಠಡಿಗಳನ್ನು ಅಥವಾ ಶಿಕ್ಷಕರ ವಾರ್ಡುಗಳನ್ನು ನಿರ್ಮಿಸುವ ಬಗ್ಗೆ ತೀರ್ಮಾನ ಕೈಗೊಳ್ಳಬೇಕೆಂದು ಸಮಿತಿಯು ಸೂಚಿಸಿತು. ಅದೇ ರೀತಿ, ಜಯದೇವ ಹೃದ್ರೋಗ ಕೇಂದ್ರದಲ್ಲಿ ಶಿಕ್ಷಕರ ವಾರ್ಡನ್ನು ನಿರ್ಮಿಸುವ ಬಗ್ಗೆ ಶೀಘ್ರ ಕ್ರಮ ತೆಗೆದುಕೊಳ್ಳಬೇಕೆಂದು ಸಮಿತಿಯು ಸೂಚಿಸಿತು.

25. ಶಿಕ್ಷಕರ ದಿನೋತ್ಸವ ಬಾವುಟಗಳನ್ನು ಕಾಲೇಜು ಶಿಕ್ಷಣ ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶಕರು ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶಕರು ಮುಖಾಂತರ <u>ಅವರ ಅಧೀನಕೊಳಪಡುವ ಕಾಲೇಜುಗಳಿಗೆ ವಿತರಣೆ ಮಾಡುವ ಬಗ್ಗೆ</u>

ಅನುಮೋದಿಸಿದೆ.

<u>ಇತರೆ ವಿಷಯಗಳು:</u>

26. ಪ್ರಥಮ ದರ್ಜೆ ಕಾಲೇಜುಗಳಲ್ಲಿ, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗೆ ಸಂಗ್ರಹವಾಗುವ ಹಣದಲ್ಲಿ ಶೇಕಡ 60ರಷ್ಟು ಹಣವನ್ನು ಅವರ ಸಂಸ್ಥೆಯ ಬಡ ವಿದ್ಯಾರ್ಥಿಗಳಿಗೆ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಪಾವತಿ ಮಾಡುವ ಸಲುವಾಗಿ ಮುರಿದುಕೊಂಡು, ಉಳಿದ ಶೇ.40ರಷ್ಟು ಹಣವನ್ನು ಕೇಂದ್ರ ಕಛೇರಿಗೆ ಕಳುಹಿಸಿಕೊಡಲಾಗುತ್ತಿದ್ದ ಪದ್ಧತಿಯನ್ನು ರದ್ದುಪಡಿಸಿ, ಇನ್ನು ಮುಂದೆ, ಪ್ರಥಮ ದರ್ಜೆ ಕಾಲೇಜುಗಳವರು ಪೂರ್ಣ ಮಂತಿಗೆ ಹಣವನ್ನು ಕೇಂದ್ರ ಕಛೇರಿಗೆ ಅರ್ಹ ವಿದ್ಯಾರ್ಥಿಗಳ ಪಟ್ಟಿಯೊಂದಿಗೆ ಕಳುಹಿಸಬೇಕೆಂದೂ, ಕೇಂದ್ರ ಕಛೇರಿಯಿಂದ ಸಂಬಂಧಿಸಿದ ವಿದ್ಯಾರ್ಥಿಗಳಿಗೆ ನೇರವಾಗಿ ಧನ ಸಹಾಯ ಬಿಡುಗಡೆ ಮಾಡಬೇಕೆಂದು ನಿರ್ಧರಿಸಲಾಯಿತು.

..8

ನಿಧಿಗಳ ಕಾರ್ಯದರ್ಶಿ:ಖಜಾಂಚಿಯವರು ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

(ಎಂ.ಎಲ್. ಚಂದ್ರಕೀರ್ತಿ)
ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ
ಹಾಗೂ ಕಾರ್ಯದರ್ಶಿ:ಖಜಾಂಚಿಗಳು.

(ಕೆ.ಹೆಚ್. ರಂಗನಾಥ್)
ಮಾನ್ಯ ಶಿಕ್ಷಣ ಸಚಿವರು, ಹಾಗೂ
ರಾಜ್ಯ ಸಮಿತಿಯ ಅಧ್ಯಕ್ಷರು

ಸಾಮಾನ್ಯ ಪ್ರಬಂಧ
ಅನುಬಂಧ-2 Despatched ದಿ. 22.1.91

OFFICE OF THE SECRETARY/TREASURER, KARNATAKA STATE TEACHERS' BENEFIT FUND AND KARNATAKA STATE STUDENTS' WELFARE FUND, NEW PUBLIC OFFICES, K.R. CIRCLE, BANGALORE-1.

--

No.F2.TBF/EST.121/90-91 Dt. 22-1-1991.

BY REGD. POST/ACKNOWLEDGEMENT DUE

## APPOINTMENT ORDER

Sub: Appointment of Computer Programmer-cum-Operator to the Office of the Karnataka State Students' Welfare Fund & Karnataka State Teachers' Benefit Fund, Bangalore

Ref: Interview of candidates on 10-12-1990

--

Sri S. Lakshmeesha, residing at 5th Main, Vth Cross, Subbaiah Compound, Gangenahalli Extension, Bangalore-32, is appointed as Computer Programmer-cum-Operator in this office in Grade Rs.1900 - 3650 purely on temporary basis for a period of one year. He will be paid the minimum of Rs.1900/- (Pay) plus other allowances as per rates admissible in the Government Offices. His appointment is purely temporary and is liable to be terminated from service at any time, without notice, at the discretion of this office.

He is directed to report for duty within 15 days from the date of receipt of this appointment order, failing which his appointment will be treated as cancelled. While reporting for duty he has to produce his educational certificates and other credentials in original.

Secretary/Treasurer.

Sri S. Lakshmeesha,
5th Main, Vth Cross,
Subbaiah Compound,

ಅನುಬಂಧ - 3

ದಿನಾಂಕ 22-4-1992ರಂದು ಮಧ್ಯಾಹ್ನ 3.00 ಗಂಟೆಗೆ ಮಾನ್ಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಇವರ ಅಧ್ಯಕ್ಷತೆಯಲ್ಲಿ ಬಹು ಅಂತಸ್ತು ಕಟ್ಟಡಗಳ ಕೊಠಡಿಯ ಸಂಖ್ಯೆ: 252 ಇಲ್ಲಿ ನಡೆದ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ನಿಧಿಗಳ ರಾಜ್ಯ ಸಮಿತಿ ಸಭೆಯ ನಡವಳಿಕೆಗಳು.

<u>ಹಾಜರಿದ್ದ ಸದಸ್ಯರು:</u>

| | | |
|---|---|---|
| 1. ಶ್ರೀ ಎಂ. ವೀರಪ್ಪ ಮೊಯಿಲಿ, ಮಾನ್ಯ ಶಿಕ್ಷಣ ಸಚಿವರು ಕರ್ನಾಟಕ ಸರ್ಕಾರ | .. | ಅಧ್ಯಕ್ಷರು |
| 2. ಶ್ರೀ ಸಿ.ಟಿ. ಬೆಂಜಮಿನ್, ಐ.ಎ.ಎಸ್. ಸರ್ಕಾರದ ಶಿಕ್ಷಣ ಕಾರ್ಯದರ್ಶಿಗಳು-1 | .. | ಸದಸ್ಯರು |
| 3. ಶ್ರೀ ಎಂ.ಎಲ್. ಚಂದ್ರಕೀರ್ತಿ, ಐ.ಎ.ಎಸ್. ಸರ್ಕಾರದ ಶಿಕ್ಷಣ ಕಾರ್ಯದರ್ಶಿಗಳು-2 | .. | ಸದಸ್ಯರು |
| 4. ಶ್ರೀ ಎಸ್.ವಿ. ರಂಗನಾಥ್, ಐ.ಎ.ಎಸ್., ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | .. | ಕಾರ್ಯದರ್ಶಿ-ಖಜಾಂಚಿಗಳು |
| 5. ಪ್ರೊ: ಅಬ್ದುಲ್ ಖಯ್ಯುಂ, ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ | .. | ಸದಸ್ಯರು |
| 6. ಶ್ರೀ ಅ. ರಾಜು, ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳ ಪರವಾಗಿ) | .. | ಸದಸ್ಯರು |
| 7. ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಹಾಗೂ ಕಿರಿಯ ಮಹಾವಿದ್ಯಾಲಯಗಳ ಪ್ರಾಚಾರ್ಯರ ಸಂಘ | .. | ಸದಸ್ಯರು |
| 8. ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ | .. | ಸದಸ್ಯರು |
| 9. ಶ್ರೀ ಕೆ.ಎಂ. ಆಳ್ವ, ಮಂಗಳೂರು | .. | ಸದಸ್ಯರು |
| 10. ಶ್ರೀ ಎಂ. ರೈಕುದ್ದೀನ್ ಮಾಜಿ ಶಾಸಕರು, ಬೀದರ | .. | ಸದಸ್ಯರು |
| 11. ಶಾಲೆಗಳ ಮುಖ್ಯ ವೈದ್ಯಕೀಯ ಪರಿವೀಕ್ಷಕರು ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ | .. | ಆಹ್ವಾನಿತರು |

<u>ಗೈರುಹಾಜರಾದ ಸದಸ್ಯರು</u>

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ
2. ಡಾ: ಹೆಚ್.ಟಿ. ಸಾಸನೂರು, ಮಾಜಿ ಶಾಸಕರು

(ಇ) ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಯಿಂದ ಜಿಲ್ಲಾ ಮಟ್ಟದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನಡೆಸುವ ಸಾಹಿತ್ಯ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡುವ ಬದಲು ವಿದ್ಯಾರ್ಥಿ-ವೇತನ ನೀಡುವ ಕುರಿತು

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು.

(ಈ) ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಅಥ್ಲೆಟಿಕ್ಸ್ ಕ್ರೀಡೆಗಳಲ್ಲಿ ವಿಜೇತರಾದವರಿಗೆ ಬಹುಮಾನ ನೀಡುವ ಪುನರ್-ವಿಮರ್ಶಿತ ಯೋಜನೆ

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು. ವಿಜೇತರಾದ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಕರು ತರಬೇತಿ ನೀಡಿರುವ ಬಗ್ಗೆ ಶಾಲಾ ಮುಖ್ಯೋಪಾಧ್ಯಾಯರು ದೃಢೀಕರಿಸಿದಲ್ಲಿ, ಅಂತಹ ದೈಹಿಕ ಶಿಕ್ಷಕರಿಗೆ 100 ರೂ.ಗಳ ನಗದು ಬಹುಮಾನವನ್ನು ನೀಡಲು ತೀರ್ಮಾನಿಸಲಾಯಿತು.

(ಉ) ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತಾಲ್ಲೂಕಿಗೆ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯರಿಗೆ ನಗದು ಬಹುಮಾನ ನೀಡುವ ಬಗ್ಗೆ

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು.

19. 'ಶಿಕ್ಷಕರ ದಿನೋತ್ಸವ' ಸಂದರ್ಭದಲ್ಲಿ ತಾಲ್ಲೂಕು ಹಂತದಲ್ಲಿ ಶಿಕ್ಷಕರ ದಿನೋತ್ಸವದ ಬಾವುಟಗಳನ್ನು ವಿತರಿಸಲು ಹಾಗೂ ಶಿಕ್ಷಕರ ಧನ ಸಹಾಯದ ಅರ್ಜಿಗಳನ್ನು ಕಳುಹಿಸಲು ಸಹಾಯಕ ಶಿಕ್ಷಣಾಧಿಕಾರಿಗಳ ಕಛೇರಿಗೆ ಅಂಚೆ ವೆಚ್ಚಕ್ಕಾಗಿ ರೂ.200ಗಳನ್ನು ಸಾದಿಲ್ವಾರು ವೆಚ್ಚವಾಗಿ ನೀಡುವ ಬಗ್ಗೆ

500 ಶಿಕ್ಷಕರಿರುವ ವಲಯಗಳ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ರೂ.200, ಮತ್ತು 500ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರಿರುವ ವಲಯಗಳ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ರೂ.300ರಂತೆ ಸಾದಿಲ್ವಾರು ವೆಚ್ಚವನ್ನು ನೀಡಲು ಸಮಿತಿಯು ಅಂಗೀಕರಿಸಿತು.

20. ಚಿಕ್ಕಮಗಳೂರಿನಲ್ಲಿ ಜಿಲ್ಲಾ ಮಟ್ಟದಲ್ಲಿ ನಡೆದ ಮಕ್ಕಳ ಶೈಕ್ಷಣಿಕ ಸಮ್ಮೇಳನಕ್ಕೆ ಕಾರ್ಯದರ್ಶಿ: ಖಜಾಂಚಿಗಳು ಮಂಜೂರು ಮಾಡಿರುವ 3,000 ರೂ.ಗಳ ಧನ ಸಹಾಯವನ್ನು ಸ್ಥಿರೀಕರಿಸುವ ಬಗ್ಗೆ

ಸ್ಥಿರೀಕರಿಸಲಾಯಿತು.

21. ಗಣಕಯಂತ್ರ ಮೇಲ್ವಿಚಾರಕರ ಹುದ್ದೆಯನ್ನು ಖಾಯಂಗೊಳಿಸುವ ಬಗ್ಗೆ

ನಿಧಿಗಳ ಕಛೇರಿಗೆ ಗಣಕಯಂತ್ರ ಮೇಲ್ವಿಚಾರಕರಾಗಿ ನೇಮಕವಾಗಿರುವ ಶ್ರೀ ಎಸ್. ಲಕ್ಷ್ಮೀಶ ಇವರ ಹುದ್ದೆಯನ್ನು ಖಾಯಂಗೊಳಿಸಿ, ಇವರ ನೇಮಕವನ್ನು ನೇಮಕಾತಿಹೊಂದಿದ ದಿನಾಂಕದಿಂದ 2 ವರ್ಷದ ಅವಧಿಯನ್ನು ಖಾಯಂ ಪೂರ್ವ ಅವಧಿ ಎಂದು ಪರಿಗಣಿಸಬೇಕೆಂದು ತೀರ್ಮಾನಿಸಲಾಯಿತು.

22. ಶ್ರೀ ಟಿ. ಶಂಕರ, ದ್ವಿತೀಯ ದರ್ಜೆ ಸಹಾಯಕರು, ಇವರ ಸೇವೆಯನ್ನು ಖಾಯಂಗೊಳಿಸಿ, ಅವರಿಗೆ ನೀಡಬೇಕಾದ ತಡೆಹಿಡಿದ ವಾರ್ಷಿಕ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಬಗ್ಗೆ.

ಪ್ರಸ್ತಾವನೆಯನ್ನು ತಿರಸ್ಕರಿಸುತ್ತಾ, ಸದರಿ ನೌಕರರು ಅವರಿಗೆ ನೀಡಲಾಗಿರುವ ನೇಮಕಾತಿ ಆದೇಶದಂತೆ ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡಲು ಮತ್ತೊಂದು ವರ್ಷ ಕಾಲಾವಕಾಶವನ್ನು ನೀಡಲಾಯಿತು, ಮತ್ತು ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲು ಕಾರ್ಯದರ್ಶಿ:ಖಜಾಂಚಿಯವರಿಗೆ ಅಧಿಕಾರ ನೀಡಲಾಯಿತು.

ಅಲ್ಲದೆ, ನಿಧಿಯ ನೌಕರರನ್ನು ಇಲಾಖೆಯ ಇತರೆ ಕಛೇರಿಗಳಿಗೆ ನಿಯೋಜನೆ ಮೇಲೆ ಕಳುಹಿಸಿ, ಕಛೇರಿ ಕೆಲಸಕಾರ್ಯಗಳಲ್ಲಿ ಸೂಕ್ತ ತರಬೇತಿಯನ್ನು ಪಡೆಯುವ ಅವಕಾಶವನ್ನು ಮತ್ತು ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡಲು ಅಗತ್ಯ ಅನುಭವವನ್ನು ಪಡೆಯುವಂತೆ ಮಾಡಲು ನಿಧಿಗಳ ಕಾರ್ಯದರ್ಶಿ:ಖಜಾಂಚಿಗಳಿಗೆ ಸೂಚನೆ ನೀಡಲಾಯಿತು.

23. ಕರ್ನಾಟಕ ರಾಜ್ಯ ಘಟಕ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದ ಉಪಸಮಿತಿಯು 1991–92ನೇ ಸಾಲಿನಲ್ಲಿ ನಡೆದ ಉಪಸಮಿತಿಯ ಸಭೆಗಳಲ್ಲಿ ಮಂಜೂರು ಮಾಡಲಾದ ಧನ ಸಹಾಯವನ್ನು ಅನುಮೋದಿಸುವ ಬಗ್ಗೆ.

ಅನುಮೋದಿಸಲಾಯಿತು.

24. ನಿಧಿಗಳ ವತಿಯಿಂದ ಬ್ಯಾಂಕ್‌ಗಳಿಗೆ ಸ್ಥಿರ ಠೇವಣಿ ನೀಡುವಾಗ ಮಾರಾಟ ಮಾಡಬೇಕಾದ ಬಾವುಟಗಳ ವಂತಿಗೆ ಸಂಗ್ರಹಣೆ ದರವನ್ನು ಹೆಚ್ಚಿಸುವ ಬಗ್ಗೆ.

ಒಂದು ಲಕ್ಷ ರೂ. ಠೇವಣಿ ಪಡೆಯಲು ಬ್ಯಾಂಕಿನವರು 500 ರೂ.ಗಳ ಬದಲು 1000 ರೂ.ಗಳ ಬಾವುಟಗಳನ್ನು ಮಾರಾಟ ಮಾಡಿ, ವಂತಿಗೆಯನ್ನು ಸಂಗ್ರಹಿಸಬೇಕೆಂಬ ಷರತ್ತನ್ನು ಅನುಮೋದಿಸಲಾಯಿತು.

25 ಶ್ರೀ ಎನ್. ಚಾಡಶೆಟ್ಟಿ, ಪ್ರಥಮ ದರ್ಜೆ ಸಹಾಯಕರು, ಇವರಿಗೆ ಅಧೀಕ್ಷಕರಾಗಿ ಬಡ್ತಿ ನೀಡಿರುವ ಕಾರ್ಯದರ್ಶಿ:ಖಜಾಂಚಿಗಳ ಕ್ರಮವನ್ನು ಸಕ್ರಮಗೊಳಿಸುವ ಕುರಿತು

ಸಕ್ರಮಗೊಳಿಸಲಾಗಿದೆ.

26. ಕರ್ನಾಟಕ ರಾಜ್ಯ ಶಿಕ್ಷಕರ. ಕಲ್ಯಾಣ ನಿಧಿ, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ನಿಧಿಗಳ ಲೆಕ್ಕಪತ್ರಗಳ ಪರಿಶೋಧನೆಗೆ ಮೆ: ಸಿ.ರಮೇಶ, ಚಾರ್ಟರ್ಡ ಅಕೌಂಟೆಂಟ್ಸ್, ಇವರನ್ನು ನೇಮಕ ಮಾಡಿರುವ ಕ್ರಮವನ್ನು ಸಕ್ರಮಗೊಳಿಸುವ ಬಗ್ಗೆ.

ಸಕ್ರಮಗೊಳಿಸಲಾಗಿದೆ.

27. ರಾಜ್ಯ ಸಮಿತಿಯ ಮತ್ತು ಉಪಸಮಿತಿಯ ಸರ್ಕಾರೇತರ ಸದಸ್ಯರಿಗೆ ನೀಡುತ್ತಿರುವ 'ಸಿಟ್ಟಿಂಗ್ ಫೀ' ದರವನ್ನು ಹೆಚ್ಚಿಸುವ ಬಗ್ಗೆ.

ರಾಜ್ಯ ಸಮಿತಿಯ ಮತ್ತು ಉಪಸಮಿತಿಯ ಸರ್ಕಾರೇತರ ಸದಸ್ಯರಿಗೆ ಈಗ ನೀಡುತ್ತಿರುವ 'ಸಿಟ್ಟಿಂಗ್ ಫೀ' ದರವನ್ನು ರೂ.50ರಿಂದ ರೂ.100ಕ್ಕೆ ಹೆಚ್ಚಿಸಲು ಸಮಿತಿಯು ಅಂಗೀಕರಿಸಿತು.

28. ನಿಧಿಗಳ ಕಚೇರಿಯಲ್ಲಿ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳ ಹುದ್ದೆಯನ್ನು ಖಾಯಂ ಆಗಿ ಮುಂದುವರಿಸುವ ಬಗ್ಗೆ

ಖಾಯಂಗೊಳಿಸಲಾಯಿತು.

29. ನಿಧಿಗಳ ಕಚೇರಿಯಲ್ಲಿ ಶಿಕ್ಷಕರನ್ನು ನಿಯೋಜನೆ ಮೇಲೆ ನೇಮಕ ಮಾಡಿಕೊಂಡಿರುವ ಕ್ರಮವನ್ನು ಸಕ್ರಮಗೊಳಿಸುವುದು

ಸಕ್ರಮಗೊಳಿಸಿದೆ.

30. ಮಾನ್ಯ ಶಿಕ್ಷಣ ಸಚಿವರು ಮತ್ತು ನಿಧಿಗಳ ಅಧ್ಯಕ್ಷರು, ದಿವಂಗತ ಪ್ರಧಾನಿ ರಾಜೀವಗಾಂಧಿಯವರು ಶಿಕ್ಷಣಕ್ಕೆ ಅದರಲ್ಲೂ ವಿಜ್ಞಾನ ಶಿಕ್ಷಣಕ್ಕೆ ನೀಡಿರುವ ಒತ್ತನ್ನು ಸ್ಮರಿಸಿ, ರಾಜ್ಯ ಮಟ್ಟದಲ್ಲಿ ಪ್ರತಿ ವರ್ಷ 25,000 ರೂ.ಗಳ ಪ್ರಶಸ್ತಿಯನ್ನು ಅತ್ಯುತ್ತಮ ವಿಜ್ಞಾನ ಶಿಕ್ಷಕರಿಗೆ ನೀಡುವ ಸಲುವಾಗಿ ಹೊಸ ಯೋಜನೆಯನ್ನು ರೂಪಿಸಲು ಕಾರ್ಯದರ್ಶಿ:ಖಜಾಂಚಿಯವರನ್ನು ಕೋರಿದರು. ಈ ಪ್ರಸ್ತಾವನೆಯಲ್ಲಿ ಪ್ರೌಢಶಾಲಾ ಹಂತದವರೆಗೆ ಒಂದು ಪ್ರಶಸ್ತಿ ಮತ್ತು ಕಾಲೇಜು ಮಟ್ಟದ ಶಿಕ್ಷಕರಿಗೆ ಒಂದು ಪ್ರಶಸ್ತಿಯನ್ನು ಯೋಜಿಸಲು ಸೂಚಿಸಲಾಯಿತು.

31. ಡಾ: ಅಂಬೇಡ್ಕರ್ ಜನ್ಮಶತಾಬ್ದಿ ವರ್ಷದ ಅಂಗವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗಾಗಿ ಅತ್ಯುತ್ತಮ ಸೌಲಭ್ಯಗಳನ್ನು ಒದಗಿಸಲು ಒಂದು ಶಾಲೆಯನ್ನು ಗುರುತಿಸಿ, ಅಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಬಹುಮಾನ ನೀಡುವ ಒಂದು ಹೊಸ ಯೋಜನೆಯನ್ನು ರೂಪಿಸಲು ಕಾರ್ಯದರ್ಶಿ:ಖಜಾಂಚಿಯವರಿಗೆ ಸೂಚಿಸಲಾಯಿತು.

32. ಪ್ರತಿಯೊಂದು ಜಿಲ್ಲೆಯಲ್ಲಿ ಪ್ರಾಥಮಿಕ ಹಂತದ ಪ್ರತಿಯೊಂದು ಮಗು ಆ ಜಿಲ್ಲೆಗಾಗಿ ಒಂದು ಕಡೆ ಏರ್ಪಡಿಸಬಹುದಾದ ಪ್ರತಿಭಾ ಶಿಬಿರಗಳಲ್ಲಿ ಕಡ್ಡಾಯವಾಗಿ ಒಮ್ಮೆಯಾದರೂ ಭಾಗವಹಿಸುವಂತಹ, ಮತ್ತು ಅಂತಹ ಮಕ್ಕಳು ತಯಾರಿಸಿದ ವಸ್ತುಗಳು ಮತ್ತು ಲೇಖನಗಳನ್ನು ಒಂದು ಕಡೆ ಶಾಶ್ವತವಾಗಿ ಪ್ರದರ್ಶಿಸಲು ಅನುಕೂಲವಾಗುವಂತೆ ಒಂದು ಪ್ರದರ್ಶನ ಸ್ಥಳವನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಏರ್ಪಡಿಸಲು ಅನುಕೂಲವಾಗುವಂತೆ ಒಂದು ಪ್ರಸ್ತಾವನೆಯನ್ನು ತಯಾರಿಸಲು ಕಾರ್ಯದರ್ಶಿ:ಖಜಾಂಚಿಯವರಿಗೆ ಸೂಚಿಸಲಾಯಿತು.

33. ನಿಧಿಗಳ ಸಂಪನ್ಮೂಲಗಳನ್ನು ಹೆಚ್ಚಿನ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ಸಲುವಾಗಿ, ಹೆಚ್ಚು ಶಿಕ್ಷಕರಿಗೆ ಅವರ ಮಕ್ಕಳ ವಿದ್ಯಾಭ್ಯಾಸ, ವೈದ್ಯಕೀಯ ಚಿಕಿತ್ಸೆ ಮುಂತಾದ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ, ವಿಮಾ ಯೋಜನೆ ಆಡಿಯಲ್ಲಿ ಹೆಚ್ಚಿನ ಸಹಾಯವನ್ನು ಪಡೆಯಲು ಜನರಲ್ ಇನ್ಶೂರೆನ್ಸ್ ಮತ್ತು ಭಾರತೀಯ ಜೀವಾವಿಮಾ ನಿಗಮ ಮುಂತಾದ ವಿಮಾ ಸಂಸ್ಥೆಗಳೊಂದಿಗೆ ವ್ಯವಹರಿಸಲು ಕಾರ್ಯದರ್ಶಿ:ಖಜಾಂಚಿಯವರನ್ನು ಕೋರಲಾಯಿತು.

34. ನಿಧಿಗಳ ಪ್ರಭಾರಾಧಿಕಾರಿಗಳ ಹುದ್ದೆಯು ಮೊದಲನೇ ದರ್ಜೆಯ ಕಿರಿಯ ವೇತನ ಶ್ರೇಣಿಯದಾಗಿದ್ದು, ಹಾಗೂ ಈಗ ಹಾಲಿ ಇರುವ ಪ್ರಭಾರಾಧಿಕಾರಿಗಳು ಉಪನಿರ್ದೇಶಕರ ಹುದ್ದೆಗೆ ಇಷ್ಟರಲ್ಲಿಯೇ ನೀಡಲಾಗುವ ಬಡ್ತಿಯ ಪಟ್ಟಿಯಲ್ಲಿ ಇರುವುದರಿಂದ, ಮತ್ತು ನಿಧಿಗಳ ಕೆಲಸದ ವ್ಯಾಪ್ತಿಯು ಹೆಚ್ಚಾಗಿದ್ದು, ನಿಧಿಗಳ ಸಂಪನ್ಮೂಲಗಳ ಸಂಗ್ರಹಣೆ ಮತ್ತು ಖರ್ಚು ಅಂದಾಜು 2 ಕೋಟಿ ರೂ.ಗಳನ್ನು ಮುಟ್ಟಿರುವುದರಿಂದ, ಜಿಲ್ಲಾ ಉಪನಿರ್ದೇಶಕರೊಂದಿಗೆ ವ್ಯವಹರಿಸಲು ಅನುಕೂಲವಾಗುವಂತೆ ಪ್ರಭಾರಾಧಿಕಾರಿಗಳ ಹುದ್ದೆಯನ್ನು ಉಪನಿರ್ದೇಶಕರು ಹಾಗೂ ವಿಶೇಷ ಅಧಿಕಾರಿಗಳು (ನಿಧಿಗಳು) ಆಗಿ ಮೇಲ್ದರ್ಜೆಗೆ ಏರಿಸಲು ತೀರ್ಮಾನಿಸಲಾಯಿತು.

ನಿಧಿಗಳ ರಾಜ್ಯ ಸಮಿತಿಯ ಸದಸ್ಯರಾಗಿ ಈವರೆಗೆ ಸೇವೆ ಸಲ್ಲಿಸಿದ ಪ್ರೊ: ಎಸ್.ಆರ್. ರೋಹಿಡೇಕರ್, ಡಾ: ಮಲಕಾರಡ್ಡಿ, ವಿಧಾನಸಭಾ ಸದಸ್ಯರು ಮತ್ತು ಶ್ರೀ ಸಿ. ಹನುಮೇಗೌಡ ಇವರಿಗೆ ವಂದನೆಗಳನ್ನು ಸಲ್ಲಿಸುತ್ತಾ, ಹೊಸ ಸದಸ್ಯರಾದ ಡಾ: ಹೆಚ್.ಟಿ. ಸಾಸನೂರು, ಶ್ರೀ ಕೆ.ಎಂ. ಆಳ್ವ ಮತ್ತು ಶ್ರೀ ಎಂ. ಲೈಕುದ್ದೀನ್ ಇವರಿಗೆ ಸ್ವಾಗತ ಕೋರುವ ತೀರ್ಮಾನವನ್ನು ಕೈಗೊಳ್ಳಲಾಯಿತು.

ವಂದನಾರ್ಪಣೆಯನಂತರ ಸಭೆಯ ಕಾರ್ಯಕಲಾಪಗಳು ಮುಕ್ತಾಯಗೊಂಡಿತು.

(ಎಸ್.ವಿ. ರಂಗನಾಥ್)
ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ
ಮತ್ತು ಕಾರ್ಯದರ್ಶಿ : ಖಜಾಂಚಿಗಳು.

(ಎಂ. ವೀರಪ್ಪ ಮೊಯಿಲಿ)
ಮಾನ್ಯ ಶಿಕ್ಷಣ ಸಚಿವರು, ಹಾಗೂ
ನಿಧಿಗಳ ರಾಜ್ಯ ಸಮಿತಿಯ ಅಧ್ಯಕ್ಷರು.

[illegible]
ಶಿಕ್ಷಣ ಮತ್ತು [illegible]
ವ್ಯವಹಾರಗಳ ಸಚಿವರು

ಕಾರ್ಯದರ್ಶಿ : ಖಜಾಂಚಿಯವರ ಕಛೇರಿ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಮತ್ತು ಕರ್ನಾಟಕ ರಾಜ್ಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ ಹಾಗೂ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು :- 560001

ಸಂಖ್ಯೆ :- ಎಫ್ 2 : ಶಿಕನಿ : ಸಿಬ್ಬಂದಿ : 121 : 90-91

ದಿನಾಂಕ :- 16-8-1993

## ಜ್ಞಾ ಪ ನಾ

ವಿಷಯ :- ಶ್ರೀ. ಎಸ್. ಲಕ್ಷ್ಮೀಶ, ಗಣಕ ಯಂತ್ರ ಮೇಲ್ವಿಚಾರಕರು, ಇವರ ಪ್ರಾಯೋಗಿಕ ಪರಾವೀಕ್ಷಾ ಅವಧಿಯನ್ನು ತೃಪ್ತಿಕರವೆಂದು ಘೋಷಿಸುವ ಬಗ್ಗೆ.

ಓದಲಾಗಿದೆ :- 1) ಈ ಕಛೇರಿಯ ಜ್ಞಾಪನ ಪತ್ರ ಸಮಸಂಖ್ಯೆ ದಿನಾಂಕ :- 22-1-91 ಹಾಗೂ 25-5-92 ದಿನಾಂಕ :-
2) ನಿಧಿಗಳ ರಾಜ್ಯ ಸಮಿತಿಯ ಸಭೆ ದಿನಾಂಕ :- 17-7-1993 ರಲ್ಲಿ ಆಗಿರುವ ತೀರ್ಮಾನ.

ಆ ದೇ ಶ :-

ಶ್ರೀ. ಎಸ್. ಲಕ್ಷ್ಮೀಶ, ಗಣಕ ಯಂತ್ರ ಮೇಲ್ವಿಚಾರಕರು, ಇವರು ಪ್ರಾಯೋಗಿಕ ಪರಾವೀಕ್ಷಾ ಅವಧಿಯಲ್ಲಿ ನಿಗದಿತ ಇಲಾಖಾ ಪರೀಕ್ಷೆಗಳನ್ನು (ಅಕೌಂಟ್ ಲೋಯರ್ [illegible], ಜನರಲ್ ಲಾ ಭಾಗ -1 ಹಾಗೂ ಕನ್ನಡ ಭಾಷಾ ಪರೀಕ್ಷೆಗಳು, ಶೀಘ್ರ [illegible] ದಿನಾಂಕ :- [illegible]-81 ರಿಂದ 1-2-83 ರವರೆಗಿನ ಗಡುವಿನ [illegible] ಹಾಗೂ ಇವರು [illegible] ಇವರ ಸೇವಾ ಅವಧಿಯನ್ನು ಪರಾವೀಕ್ಷಾ ಅವಧಿಯಲ್ಲಿ ತೃಪ್ತಿಕರವಾಗಿ ಸೇವೆ ಸಲ್ಲಿಸಿರುವುದರಿಂದ ಇವರ ಸೇವಾ ಅವಧಿಯನ್ನು ತೃಪ್ತಿಕರವೆಂದು ಕರ್ನಾಟಕ ಸರ್ಕಾರಿ ಸೇವಾ ಅಧಿನಿಯಮ 1957 ಪ್ರಕರಣ 5 ( ) ರನ್ವಯ ಘೋಷಿಸಿ ಇವರ ಸೇವೆಯನ್ನು ಖಾಯಂಗೊಳಿಸಲಾಗಿದೆ.

(ಸಹಿ) 16.8

ಸಹಾಯಕ ಕಾರ್ಯದರ್ಶಿ, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ಹಾಗೂ ಕಾರ್ಯದರ್ಶಿ : ಖಜಾಂಚಿಗಳು

ಗೆ,
1) ಶ್ರೀ. ಎಸ್. ಲಕ್ಷ್ಮೀಶ, ಗಣಕ ಯಂತ್ರ ಮೇಲ್ವಿಚಾರಕರು, ನಿಧಿಗಳ ಕಛೇರಿ, ಬೆಂಗಳೂರು -1
2) ಸಿಬ್ಬಂದಿ ವಿಭಾಗ
3) ಸೇವಾ ಪುಸ್ತಕ ಪ್ರತಿ
4) ಕಛೇರಿ ಪ್ರತಿ

Pay scale : 78000 - 148200

Basic : 137700

OFFICE OF THE SECRETARY/TREASURER, KARNATAKA STATE TEACHERS' BENEFIT FUND AND KARNATAKA STATE STUDENTS' WELFARE FUND, 5TH MAIN, 4TH CROSS, GANDHINAGAR, BANGALORE - 560 009

Dated: 26-7-1994

No.F2.TBF.EST.121/90-91

MEMO

Sub: Resignation of Sri S. Lakshmeesha, Computer Programmer-cum-Operator, Karnataka State Teachers' Benefit Fund, Bangalore

Ref: Acceptance of resignation of Sri S.Lakshmeesha vide Memo of even number dated 26-7-1994

Consequent on acceptance of resignation tendered by Sri S. Lakshmeesha, with effect from 26-7-1994, vide Memo referred to above, Sri S. Lakshmeesha is relieved from the post of Computer Programmer-cum-Operator in the Funds' Office on the afternoon of 26-7-1994. No dues are outstanding from him to the Funds' Office.

26/7

For Secretary/ Treasurer

26/7/94

To

1. Sri S. Lakshmeesha, Computer Programmer-cum-Operator
2. concerned file
3. office copy

ಕಾರ್ಯದರ್ಶಿ: ಮಹಾಪ್ರಬಂಧಕರ ಕಛೇರಿ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಮತ್ತು ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, 9ನೇ ಮುಖ್ಯ ರಸ್ತೆ, 4ನೇ ಅಡ್ಡ ರಸ್ತೆ, ಗಾಂಧಿನಗರ, ಬೆಂಗಳೂರು-560009

ಸಂ.ಎಫ್2:ಶಕನಿ:ಸಿಬ್ಬಂದಿ-121:90-91

ದಿನಾಂಕ: 21-6-1995

## ನೇಮಕಾತಿ ಆದೇಶ

ವಿಷಯ: ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಮತ್ತು ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗಳ ಕಛೇರಿಗೆ ಕಂಪ್ಯೂಟರ್ ಪ್ರೋಗ್ರಾಮರ್:ಆಪರೇಟರನ್ನು ನೇಮಕ ಮಾಡಿಕೊಳ್ಳುವ ಕುರಿತು

ಉಲ್ಲೇಖ: ಅಭ್ಯರ್ಥಿಗಳಿಗೆ ದಿನಾಂಕ 14-6-95ರಂದು ನಡೆಸಲಾದ ಸಂದರ್ಶನ

—:—

ಶ್ರೀಮತಿ ಎನ್. ಗೀತಾ, ನಂ.1029, 4ನೇ ಮೈನ್, 'ಡಿ' ಬ್ಲಾಕ್, 2ನೇ ಹಂತ, ರಾಜಾಜಿನಗರ, ಬೆಂಗಳೂರು-560010, ಇವರನ್ನು ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಮತ್ತು ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗಳ ಕಛೇರಿಯಲ್ಲಿನ ಕಂಪ್ಯೂಟರ್ ಪ್ರೋಗ್ರಾಮರ್:ಆಪರೇಟರ್ ಹುದ್ದೆಗೆ ರೂ.2050-3950ರ ವೇತನ ಶ್ರೇಣಿಯಲ್ಲಿ ತಾತ್ಕಾಲಿಕವಾಗಿ ನೇಮಕ ಮಾಡಲಾಗಿದೆ. ಇವರಿಗೆ ಕನಿಷ್ಠ ವೇತನ ರೂ.2050 ಮತ್ತು ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯವಾಗುವ ಇತರೆ ಭತ್ಯೆಗಳನ್ನು ನೀಡಲಾಗುವುದು.

ಇವರ ನೇಮಕಾತಿಯು ಎರಡು ವರ್ಷಗಳ ಖಾಯಂಪೂರ್ವ ಸೇವಾ ಅವಧಿಯನ್ನು ಹೊಂದಿರುತ್ತದೆ. ಈ ಅವಧಿಯಲ್ಲಿ ಇವರ ಕೆಲಸ, ಗುಣ ಮತ್ತು ನಡತೆ ತೃಪ್ತಿಕರವಾಗಿ ಕಂಡುಬರದಿದ್ದಲ್ಲಿ, ಇವರಿಗೆ ಯಾವುದೇ ಮುನ್ಸೂಚನೆಯನ್ನು ನೀಡದೆ ಸೇವೆಯಿಂದ ತೆಗೆದುಹಾಕಲಾಗುವುದು.

ಈ ನೇಮಕಾತಿ ಆದೇಶ ತಲುಪಿದ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗಲು ಶ್ರೀಮತಿ ಎನ್. ಗೀತಾ ಇವರಿಗೆ ನಿರ್ದೇಶಿಸಿದೆ. ತಪ್ಪಿದಲ್ಲಿ, ಇವರ ನೇಮಕವನ್ನು ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು. ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ಎಲ್ಲಾ ಮೂಲ ಪ್ರಮಾಣಪತ್ರಗಳನ್ನು ಹಾಜರುಪಡಿಸಲು ಸೂಚಿಸಿದೆ.

ಕಾರ್ಯದರ್ಶಿ : ಮಹಾಪ್ರಬಂಧಕರು.